## <u>ಕರ್ನಾಟಕ ಲೋಕಾಯುಕ್ತ</u>

ಸಂ.ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ/6032/2020/ಎಆರ್‌ಇ-20

ಬಹುಮಹಡಿಗಳ ಕಟ್ಟಡ
ಡಾ:ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದಿನಾಂಕ 16-9-2023

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ರಡಿ ವರದಿ</u>

ವಿಷಯ: ಈ ಕೆಳಕಂಡ ಸರ್ಕಾರಿ ಅಧಿಕಾರಿಗಳ ದುರ್ನಡತೆ/ಕರ್ತವ್ಯ ಲೋಪದ ಕುರಿತು;

(1) ಶ್ರೀ ಮೋನಪ್ಪ, ಹಿಂದಿನ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಅ.ಪಂ.ರಾ.ಇಂ. ಯೋಜನಾ ವಿಭಾಗ, ಕಲಬುರಗಿ ಮತ್ತು ಪ್ರಸ್ತುತ ಕಾರ್ಯಪಾಲಕ ಅಭಿಯಂತರರು, ಗ್ರಾ.ಅ.ಪಂ.ರಾ.ಇಂ. ಯೋಜನಾ ವಿಭಾಗ, ರಾಯಚೂರು.

(2) ಶ್ರೀ ವಿವೇಶಕ ಕುಲಕರ್ಣಿ, ಹಿಂದಿನ ತಾಂತ್ರಿಕ ಸಹಾಯಕರು, ಗ್ರಾ.ಅ.ಪಂ.ರಾಇಂ. ಯೋಜನಾ ವಿಭಾಗ, ಕಲಬುರಗಿ.

****

ಶ್ರೀ ಶ್ರವಣಕುಮಾರ ಡಿ. ನಾಯಕ, ಜೈಸಂತೋಷಿಮ ಕಾಂಪ್ಲೇಕ್ಸ್, 3ನೇ ಮಹಡಿ, ಎನ್‌ಜಿಒ ಕಾಲೋನಿ, ನ್ಯೂ ಜೇವರ್ಗಿ ರೋಡ್, ಕಲಬುರಗಿ **(ಇನ್ನು ಮುಂದೆ "ಫಿರ್ಯಾದಿದಾರರು" ಎಂದು ಕರೆಯಲ್ಪಡುತ್ತಾರೆ)** ಇವರು ಪ್ರಪತ್ರ 1 ಮತ್ತು 2 ರಂತೆ ಸಲ್ಲಿಸಿದ ಫಿರ್ಯಾದಿಯಲ್ಲಿ ಸರ್ಕಾರಿ/ಸಾರ್ವಜನಿಕ ಅಧಿಕಾರಿ/ನೌಕರರಾದ (1) ಶ್ರೀ ಸುರೇಶ ಶರ್ಮಾ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಯೋಜನಾ ವಿಭಾಗ, ಕಲಬುರಗಿ, (2) ಶ್ರೀ ಎಸ್.ಎಸ್. ಪಾಟ್ನಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಯೋಜನಾ ವಿಭಾಗ, ಕಲಬುರಗಿ, (3) ಶ್ರೀ ಪಟ್ಟಣಶೆಟ್ಟಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಯೋಜನಾ ವಿಭಾಗ, ಕಲಬುರಗಿ, (4) ಶ್ರೀ ಖಾದ್ರಿ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಯೋಜನಾ ವಿಭಾಗ, ಕಲಬುರಗಿ ಮತ್ತು (5) ಶ್ರೀ ಚಂದ್ರಯ್ಯ

ಎಂ.ದೇವಣಗಾಂವ, ಗುತ್ತಿಗೆದಾರರು, ಸಾ: ಗೋಗಿ, ತಾಲ್ಲುಕು ಶಹಪುರ, ಜಿಲ್ಲೆ: ಯಾದಗಿರಿ **(ಇನ್ನು ಮುಂದೆ "1 ರಿಂದ 5ನೇ ಎದುರುದಾರರು/ ಎದುರುದಾರ-1, 2, 3, 4 ಮತ್ತು 5" ಎಂದು ಅನುಕ್ರಮವಾಗಿ ಕರೆಯಲ್ಪಡುತ್ತಾರೆ)** ಮತ್ತು ಈ ಸಂಸ್ಥೆಯ ತಾಂತ್ರಿಕ ವಿಭಾದ ತನಿಖಾಧಿಕಾರಿಗಳ ವರದಿಯನ್ವಯ **ಶ್ರೀ ಮೋನಪ್ಪ,** ಹಿಂದಿನ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಅ.ಪಂ.ರಾ.ಇಂ. ಯೋಜನಾ ವಿಭಾಗ, ಕಲಬುರಗಿ ಮತ್ತು ಪ್ರಸ್ತುತ ಕಾರ್ಯಪಾಲಕ ಅಭಿಯಂತರರು, ಗ್ರಾ.ಅ.ಪಂ.ರಾ.ಇಂ. ಯೋಜನಾ ವಿಭಾಗ, ರಾಯಚೂರು ಮತ್ತು **ಶ್ರೀ ವಿವೇಕ ಕುಲಕರ್ಣಿ,** ಹಿಂದಿನ ತಾಂತ್ರಿಕ ಸಹಾಯಕರು, ಗ್ರಾ.ಅ.ಪಂ.ರಾಇಂ. ಯೋಜನಾ ವಿಭಾಗ, ಕಲಬುರಗಿ ಇವರುಗಳನ್ನು ಈ ಪ್ರಕರಣದ 5 ಮತ್ತು 6ನೇ ಎದುರುದಾರರನ್ನಾಗಿ ಸೇರ್ಪಡೆಗೊಳಸಲಾಗಿದೆ **(ಇನ್ನು ಮುಂದೆ "5 ಮತ್ತು 6ನೇ ಎದುರುದಾರರು/ಎದುರುದಾರ 5, 6 ಎಂದು ಅನುಕ್ರಮವಾಗಿ ಕರೆಯಲ್ಪಡುತ್ತಾರೆ)** ರವರುಗಳ ವಿರುದ್ಧ ಮತ್ತು ತನಿಖಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿಯಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ ಮತ್ತು ಕೋರಿರುವ ಪರಿಹಾರ;**

ವಿಶೇಷ ಅಭಿವೃದ್ಧಿ ಯೋಜನೆ 2017-18ನೇ ಸಾಲಿನ ಅನುದಾನದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಗ್ರಾಮೀಣ ಅಭಿವೃದ್ಧಿ ಯೋಜನೆ ಇಲಾಖೆಯಿಂದ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಭೋಸಗಾ (ಕೆ) ಗ್ರಾಮದಿಂದ ಜೇರಟಗಿ ಮುಖ್ಯ ರಸ್ತೆ ಕೂಡುವ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ ಕಾಮಗಾರಿ ರೂ.2 ಕೋಟಿ ಅನುದಾನದಲ್ಲಿ ನಡೆಯುತ್ತಿದ್ದು ಸದರಿ ಕಾಮಗಾರಿ ಸಂಪೂರ್ಣ ಕಳಪೆ ಮಟ್ಟದ್ದಾಗಿದ್ದು ಎಸ್ಟಿಮೇಟ್ ಪ್ರಕಾರ ನಡೆಯದೇ ಅದಕ್ಕೆ ಕಳಪೆ ಮಟ್ಟದ ವಸ್ತುಗಳನ್ನು ಬಳಸುತ್ತಿದ್ದು ಕಾಮಗಾರಿ ಅರ್ಥಬರ್ದ ಮುಗಿದಿದ್ದು ಮಾಡಿದ ರಸ್ತೆ ಡಾಂಬರೀಕರಣ ಕಾಮಗಾರಿ ಕಿತ್ತು ಹೋಗುತ್ತಿದ್ದು ಅದನ್ನು ಮರುನಿರ್ಮಾಣ ಮಾಡಬೇಕೆಂದು, ಕಾಮಗಾರಿ ಸ್ಥಳದಲ್ಲಿ ಎ.ಇ.ಇ., ಜೆ.ಇ. ಇರುವುದಿಲ್ಲ

ಎಂದು, ಗುಣಮಟ್ಟ ಮಾಡುವವರೆಗೆ ಕಾಮಗಾರಿ ಬಿಲ್ಲು ಮಾಡಬಾರದೆಂದು ಅನೇಕ ಬಾರಿ ಅಧಿಕಾರಿಗಳಿಗೆ ದೂರು ಮಾಡುತ್ತಾ ಬಂದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಇದ್ದು ಸದರಿ ಕಾಮಗಾರಿಗೆ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕೋರಿ ಫಿರ್ಯಾದಿದಾರರು ಈ ಪ್ರಕರಣವನ್ನು ದಾಖಲಿಸಿದ್ದಾರೆ. ಫಿರ್ಯಾದಿಯ ದಿನಾಂಕ 10-1-2020 ಇರುತ್ತದೆ. ಫಿರ್ಯಾದಿಗೆ ಲಗತ್ತು ದಿನಾಂಕ 7-11-2019 ರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಗ್ರಾಮೀಣ ಅಭಿವೃದ್ಧಿ ಯೋಜನೆ ವಿಭಾಗಕ್ಕೆ ಸಲ್ಲಿಸಿದ ವಿವಿಧ ಅರ್ಜಿಗಳ ಪ್ರತಿಗಳನ್ನು ಹಾಜರುಪಡಿಸಿದ್ದಾರೆ; ಅಲ್ಲದೇ ಕಳಪೆ ಕಾಮಗಾರಿ ಎನ್ನಲು ಕೆಲವು ಫೋಟೋ ಪ್ರತಿಗಳನ್ನು ಹಾಜರುಪಡಿಸಿದ್ದಾರೆ.

3) 1ನೇ ಎದುರುದಾರರಾದ ಶ್ರೀ ಸುರೇಶ ಎಲ್. ಶರ್ಮಾ ರವರು ದಿನಾಂಕ 18-3-2020 ರ ಆಕ್ಷೇಪಣೆ ಸಲ್ಲಿಸಿದ್ದಾರೆ; 2ನೇ ಎದುರುದಾರರಾದ ಶ್ರೀ ಷಣ್ಮುಖಪ್ಪ ಎಸ್. ಪಟ್ಟೇ ರವರು ದಿನಾಂಕ 18-3-2020 ರ ಆಕ್ಷೇಪಣೆ ಸಲ್ಲಿಸಿದ್ದಾರೆ; 3ನೇ ಎದುರುದಾರರಾದ ಶ್ರೀ ಎಸ್.ಎಸ್.ಪಟ್ಟಣಶೆಟ್ಟಿ ರವರು ದಿನಾಂಕ 18-6-2020 ರ ಆಕ್ಷೇಪಣೆ ಸಲ್ಲಿಸಿದ್ದಾರೆ; 4ನೇ ಎದುರುದಾರರಾದ ಶ್ರೀ ಎಸ್.ಜೆ. ಖಾದ್ರಿ ರವರು ದಿನಾಂಕ 19-3-2020 ರ ಆಕ್ಷೇಪಣೆ ಸಲ್ಲಿಸಿದ್ದಾರೆ.

4) 5ನೇ ಎದುರುದಾರರಾದ ಶ್ರೀ ಚಂದ್ರಯ್ಯ ದೇವನಗಾಂವ ರವರು **ಗುತ್ತಿಗೆದಾರರಾಗಿದ್ದು** ದಿನಾಂಕ 17-6-2020 ರ ಆಕ್ಷೇಪಣೆ ಸಲ್ಲಿಸಿದ್ದಾರೆ. ಅದಾಗ್ಯೂ 5ನೇ ಎದುರುದಾರರ ಆಕ್ಷೇಪಣೆಗಳು 1 ರಿಂದ 4ನೇ ಎದುರುದಾರರ ಆಕ್ಷೇಪಣೆಗಳೊಂದಿಗೆ ಯಥಾವತ್ತ ಹೋಲಿಕೆ ಇರುವುದು ಕಂಡುಬರುತ್ತದೆ.

5) 1 ರಿಂದ 4ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳು ಒಂದಕ್ಕೊಂದು ಒಂದೇ ತೆರನಾಗಿರುತ್ತದೆ.

6) 1 ರಿಂದ 4ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳು;

ತಮ್ಮ ಆಕ್ಷೇಪಣೆಗಳಲ್ಲಿ 1 ರಿಂದ 4ನೇ ಎದುರುದಾರರು ತಮ್ಮ ವಿರುದ್ಧ ಮಾಡಿದ ಆರೋಪಗಳನ್ನು ಅಲ್ಲಗಳೆಯುತ್ತಾರೆ; ಮುಂದುವರೆದು ಸದರಿ ಕಾಮಗಾರಿ ಪರಿವೀಕ್ಷಣೆಗಾಗಿ ಮುಖ್ಯ ಕಾರ್ಯಾಚರಣೆ ಅಧಿಕಾರಿ ಬೆಂಗಳೂರು ಇವರು ತಮ್ಮ ಇಲಾಖೆಯಿಂದ ನೇಮಕ ಮಾಡಿದ 3ನೇ ತಂಡದ ವತಿಯಿಂದ ಕಾಲಕಾಲಕ್ಕೆ ಕರ್ನಾಟಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಎರಡು ತಂಡಗಳು ಕಾಮಗಾರಿ ಚಾಲ್ತಿಯಲ್ಲಿರುವಾಗಲೇ ಹಂತಹಂತವಾಗಿ ತಾಂತ್ರಿಕ ತಪಾಸಣೆ ಮಾಡಿ ಗುಣಮಟ್ಟ ಪರಿಶೀಲಿಸಿ ಒಳ್ಳೆಯ ಗುಣಮಟ್ಟದಲ್ಲಿ ನಿರ್ಮಿಸಿದ ಕಾಮಗಾರಿ ಎಂದು ವರದಿ ನೀಡಿರುವುದನ್ನು ಉಲ್ಲೇಖಿಸುತ್ತಾರೆ; ಮುಂದುವರೆದು ಸದರಿ ಕಾಮಗಾರಿ ಡಾಂಬರೀಕರಣ ಆದನಂತರ 2019-20ನೇ ಸಾಲಿನ ಬಾರಿ ಮಳೆಯಿಂದ ಹಾನಿಯಾಗಿದ್ದು ಅಲ್ಲದೇ ಸದರಿ ರಸ್ತೆ ಅತೀವೃಷ್ಟಿಯಿಂದ ಹಾಳಾದ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ರಸ್ತೆ ಪರಿಶೀಲನೆ ಮಾಡಿಸಿದ್ದು ಬಾರಿ ಮಳೆಯಿಂದ ಹಾನಿಯಾಗಿರುವುದು ದೃಢಪಟ್ಟಿದ್ದಲ್ಲದೇ ಸದರಿ ರಸ್ತೆ ದುರಸ್ಥಿಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಹೇಳುತ್ತಾರೆ; ಅದಲ್ಲದೇ ಅದಕ್ಕಾಗಿ ಅನುದಾನದಲ್ಲಿ ಸರ್ಕಾರಿ ಮಂಜೂರಾತಿ ನೀಡಲಾಗಿದೆ ಎಂದು ಹೇಳುತ್ತಾರೆ; ಮುಂದುವರೆದು ಅದರಂತೆ ಸದರಿ ರಸ್ತೆ ದುರಸ್ಥಿಗಾಗಿ ಟೆಂಡರ್ ಕರೆದು ಸದರಿ ರಸ್ತೆ ಕಾಮಗಾರಿಗಳ ಹಾನಿಯಾಗಿರುವ ಚೈನೇಜ್‌ಗಳಲ್ಲಿ ದುರಸ್ಥಿ ಕಾಮಗಾರಿ ಚಾಲ್ತಿಯಲ್ಲಿದೆ ಎಂದು ಹೇಳುತ್ತಾರೆ; 2ನೇ ಎದುರುದಾರರು ಮುಂದುವರೆದು ತಾನು ಪ್ರಭಾರ ವಹಿಸಿಕೊಳ್ಳುವ ಮುಂಚೆಯೇ ಸದರಿ ಕಾಮಗಾರಿ ಪೂರ್ಣಗೊಂಡಿದ್ದು ತಾನು ದಿನಾಂಕ 31-10-2019 ರಂದು ಯೋಜನಾ ಉಪವಿಭಾಗ, ಕಲಬುರ್ಗಿ ಕಛೇರಿಯ ಪ್ರಭಾರ ವಹಿಸಿಕೊಂಡಿರುವುದಾಗಿ ಹೇಳುತ್ತಾರೆ.

7) 1 ರಿಂದ 4ನೇ ಎದುರುದಾರರ ಮೇಲಿನ ಆರೋಪಗಳ ನಿರಾಕರಣೆಗೆ ಅನುಗುಣವಾಗಿ ಈ ಪ್ರಕರಣವನ್ನು ಗೌರವಾನ್ವಿತರ ಅನುಮೋದನೆಯೊಂದಿಗೆ ಈ ಸಂಸ್ಥೆಯ ತಾಂತ್ರಿಕ ವಿಭಾಗಕ್ಕೆ ತನಿಖೆಗಾಗಿ ವಹಿಸಲಾಗಿತ್ತು; ಅದರಂತೆ

ತನಿಖಾಧಿಕಾರಿಗಳಾದ ಶ್ರೀ ಆರ್.ರವಿಶಂಕರ, ಸಹಾಯಕ ಕಾರ್ಯಪಾಲಕ ಅಭಿಯಂತರರು-05 ರವರು ದಿನಾಂಕ 22-12-2021 ರ ತನಿಖಾ ವರದಿ ಸಲ್ಲಿಸಿದ್ದಾರೆ; ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ "6ನೇ ಎದುರುದಾರರಾದ ಶ್ರೀ ಮೋನಪ್ಪ, 7ನೇ ಎದುರುದಾರರಾದ ಶ್ರೀ ವಿವೇಕ ಕುಲಕರ್ಣಿ ಮತ್ತು ಶ್ರೀ ಮುಸ್ತಾಕ್ ಅಹಮದ್ (ಮೃತ) ಎನ್ನುವವರು ಪ್ರಶ್ನಿತ ರಸ್ತೆ ಹಾನಿಗೆ ಕಾರಣರಾಗಿದ್ದು, ಸರ್ಕಾರಕ್ಕೆ ಸುಮಾರು ರೂ.4,28,299/- ಗಳ ಹಾನಿ ಉಂಟು ಮಾಡಿದ್ದು ಸದರಿಯವರನ್ನು ಈ ಪ್ರಕರಣಕ್ಕೆ ಎದುರುದಾರರನ್ನಾಗಿ ಸೇರ್ಪಡಿಸಿಕೊಳ್ಳುವುದು ಅವಶ್ಯಕ" ಎಂದು ವರದಿಸಿದ್ದು **ಅದರಂತೆ ಮೃತ ಮುಸ್ತಾಕ ರವರನ್ನು ಹೊರತುಪಡಿಸಿ** ಉಳಿದ ಇಬ್ಬರನ್ನು ಎದುರುದಾರರನ್ನಾಗಿ ಈ ಪ್ರಕರಣಕ್ಕೆ ಸೇರ್ಪಡಿಸಲಾಯಿತು; ಅದರಂತೆ 6 ಮತ್ತು 7ನೇ ಎದುರುದಾರರ ಆಕ್ಷೇಪಣೆ ಕೇಳಲಾಯಿತು.

8) ದಿನಾಂಕ 10-12-2021 ರ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಅ.ಪಂ.ರಾ.ಇಂ. ಯೋಜನಾ ವಿಭಾಗ, ಕಲಬುರಗಿ ಇವರು ತನಿಖಾಧಿಕಾರಿಗಳಿಗೆ ನೀಡಿದ ಮಾಹಿತಿ ಪ್ರಕಾರ ಶ್ರೀ ಮುಸ್ತಾಕ್ ಅಹಮದ್ ರವರು ನಿಧನರಾಗಿರುತ್ತಾರೆ ಎಂದು ನಮೂದಿಸಲಾಗಿದೆ.

9) 6ನೇ ಎದುರುದಾರರಾದ ಶ್ರೀ ಮೋನಪ್ಪ ರವರು ದಿನಾಂಕ 13-4-2022 ರ ಮತ್ತು ದಿನಾಂಕ 19-5-2022 ರ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ; 7ನೇ ಎದುರುದಾರರಾದ ಶ್ರೀ ವಿವೇಕ ಕುಲಕರ್ಣಿ ರವರು ದಿನಾಂಕ 4-3-2022 ರ ಆಕ್ಷೇಪಣೆ ಸಲ್ಲಿಸಿದ್ದಾರೆ.

10) 6ನೇ ಎದುರುದಾರರಾದ ಶ್ರೀ ಮೋನಪ್ಪ ರವರ ಆಕ್ಷೇಪಣೆಗಳು;

6ನೇ ಎದುರುದಾರರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾರೆ; ಮುಂದುವರೆದು ತಾನು ದಿನಾಂಕ 11-7-2018 ರಿಂದ ದಿನಾಂಕ 14-8-2018 ರವರೆಗೆ ಕಲಬುರಗಿ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯ ಪ್ರಭಾರದಲ್ಲಿದ್ದು

ಸದರಿ ಅವಧಿಯಲ್ಲಿ ದಿನಾಂಕ 11-7-2018 ರ ಕರಾರು ಪತ್ರ ಆಗಿರುತ್ತದೆ; ಅದೇ ದಿನ 2 ಮತ್ತು 4ನೇ ಎದುರುದಾರರು ಮಾರ್ಕಔಟ್ ನೀಡಿರುತ್ತಾರೆ; ದಿನಾಂಕ 30-11-2019 ರಂದು ಕಾಮಗಾರಿ ಪೂರ್ಣಗೊಳಿಸಿರುವುದು ಕಂಡುಬರುತ್ತದೆ; ದಿನಾಂಕ 30-11-2019 ರಿಂದ ದಿನಾಂಕ 29-11-2020 ರ ಅವಧಿಯಲ್ಲಿ ಕಾಮಗಾರಿ ನ್ಯೂನ್ಯತೆಯನ್ನು ಸುಸ್ಥಿತಿಗೆ ತರುವ ಷರತ್ತು ಇರುತ್ತದೆ; ಈ ಪ್ರಕರಣ ದಾಖಲಿಸುವ ಮುಂಚೆಯೇ ಅಂದರೆ ದಿನಾಂಕ 7-11-2019 ರಂದು ಫಿರ್ಯಾದಿದಾರರು ಶ್ರೀ ಸುರೇಶ ಶರ್ಮಾ, ಶ್ರೀ ಎಸ್.ಎಸ್.ಪಾಟ್ನೆ ಇವರಿಗೆ ಕಳಪೆ ಗುಣಮಟ್ಟದ ಬಗ್ಗೆ ಫಿರ್ಯಾದಿ ಸಲ್ಲಿಸಿದ್ದು ಅಲ್ಲದೇ ಶ್ರೀ ಪಾಟ್ನೆ ಮತ್ತು ಸುರೇಶ ಶರ್ಮಾ ರವರು ದ್ವಂದ್ವ ಹೇಳಿಕೆ ನೀಡಿದ್ದು ಅಲ್ಲದೇ ಇತರ ದಾಖಲೆಗಳನ್ನು ಪರಿಶೀಲಿಸಿದಾಗ ಕಾಮಗಾರಿ ದಿನಾಂಕ 30-11-2019 ರಂದು ಪೂರ್ಣಗೊಂಡಿರುತ್ತದೆ; ಸದರಿ ದಿನಾಂಕ 30-11-2019 ರಿಂದ ಕರಾರು ಪ್ರಕಾರ ಒಂದು ವರ್ಷದ ಅವಧಿಗೆ ಕಾಮಗಾರಿ ನಿರ್ವಹಣೆ ಮಾಡುವ ಹೊಣೆಗಾರಿಕೆ ಗುತ್ತಿಗೆದಾರರದು ಇದ್ದು ಸದರಿ ಒಂದು ವರ್ಷದ ಅವಧಿ (Defect liability) ದಿನಾಂಕ 30-11-2020 ರಂದು ಅಂತ್ಯವಾಗುವುದು; ಈ ಅಂಶಗಳಿಂದ ಹಾಗೂ ಫಿರ್ಯಾದಿದಾರರ ಆರೋಪಗಳಿಂದ Defect liability ಅವಧಿ ಅಂದರೆ ದಿನಾಂಕ 30-11-2020 ರ ಪೂರ್ವದಲ್ಲಿ ಅಂದರೆ ದಿನಾಂಕ 7-11-2019 ರ ಪೂರ್ವದಲ್ಲಿ ರಸ್ತೆ ಕೆಟ್ಟು ಹೋಗಿದ್ದು, ನಿರ್ಮಾಣ ಮಾಡಿದ ಅಧಿಕಾರಿಗಳು (ಸುರೇಶ ಶರ್ಮಾ ಮತ್ತು ಎಸ್.ಎಸ್.ಪಾಟ್ನೆ) ಸದರಿ ತಪ್ಪನ್ನು ಸರಿಪಡಿಸಿಕೊಳ್ಳದೇ ದಾರಿ ತಪ್ಪಿಸುವ ಮಾಹಿತಿ ನೀಡಿದ್ದಾರೆ; ದಿನಾಂಕ 30-11-2019 ರಿಂದ ದಿನಾಂಕ 30-11-2020 ರವರೆಗೆ ಡಿ.ಎಲ್.ಪಿ. ಇರುವುದರಿಂದ ಸರಿಪಡಿಸುವ ಹೊಣೆ ಗುತ್ತಿಗೆದಾರರದ್ದಾಗಿದ್ದು ಈ ಬಗ್ಗೆ ಅನುಷ್ಠಾನಾಧಿಕಾರಿಯವರು ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ; ಸುಧಾರಣೆ ಕಾಮಗಾರಿ, ನೀರಿನ ಪ್ರವಾಹ ದುರಸ್ಥಿ ಕಾಮಗಾರಿಗಳನ್ನು ದಿನಾಂಕ 16-3-2020 ರಂದು ತೆಗೆದುಕೊಂಡು ದಿನಾಂಕ 15-5-2020 ರ ಒಳಗೆ ಪೂರ್ಣ ಮಾಡಲಾಗಿದೆ; ಫಿರ್ಯಾದಿ ದಾಖಲಿಸಿದ ಎರಡು ವರ್ಷಗಳ ನಂತರ ಸ್ಥಳ ಪರಿವೀಕ್ಷಣೆ ಮಾಡಿ ದಿನಾಂಕ 22-12-2021 ರಂದು ತನಿಖಾ ವರದಿ ಸಲ್ಲಿಸಿದ್ದಾರೆ; ಸ್ಥಳ ಪರಿವೀಕ್ಷಣೆ ಕಾಲದಲ್ಲಿ

ತನ್ನನ್ನು ಹಾಜರುಪಡಿಸಿಕೊಂಡಿರುವುದಿಲ್ಲ; ತನ್ನ ಕಾರ್ಯಾವಧಿಯಲ್ಲಿ ಪ್ರಭಾರ
ವಹಿಸಿಕೊಂಡ ದಿನವೇ ರಸ್ತೆ ಸುಧಾರಣೆಯ ಗುತ್ತಿಗೆದಾರರಿಂದ ಕರಾರುಪತ್ರ ಮಾತ್ರ
ಬರೆಯಿಸಿ ಕೊಂಡಿರುತ್ತೇನೆ; ರಸ್ತೆ ಸುಧಾರಣೆ ಕಾಮಗಾರಿ ಪೂರ್ಣಗೊಂಡ ನಂತರ
ಹಾಗೂ ಮಳೆ ಪ್ರವಾಹದಿಂದ ಹಾಳಾದ ರಸ್ತೆಯನ್ನು ಪೂರ್ಣಗೊಂಡ ನಂತರ ದಿನಾಂಕ
15-5-2020 ರಂದು ಸ್ಥಳ ಪರಿವೀಕ್ಷಣೆ ಮಾಡಲಾಗಿದೆ; ತನಿಖಾಧಿಕಾರಿಗಳ
ವರದಿಯಲ್ಲಿ ರಸ್ತೆ ಹಾಳಾಗಿರುವುದಕ್ಕೆ ನಿರ್ದಿಷ್ಟ ಕಾರಣ ತೋರಿಸಿರುವುದಿಲ್ಲ; ಮಳೆ
ಪ್ರವಾಹದಿಂದ ಹಾಳಾದ ರಸ್ತೆಯನ್ನು ದಿನಾಂಕ 16-3-2020 ರಂದು ಪ್ರಾರಂಭಿಸಿ
ದಿನಾಂಕ 15-5-2020 ರಂದು ದುರಸ್ಥಿ ಪೂರ್ಣಗೊಳಸಲಾಗಿದೆ; ದಿನಾಂಕ 15-5-
2020 ರಿಂದ ದಿನಾಂಕ 15-5-2021 ರವರೆಗೆ ಒಂದು ವರ್ಷ ದೋಷಮುಕ್ತ
ನಿರ್ವಹಣೆ ಮಾಡುವ ಷರತ್ತು ಇರುತ್ತದೆ; ತನಿಖಾಧಿಕಾರಿಯವರು ಗುರುತಿಸಿದ
ನ್ಯೂನ್ಯತೆಗಳು ದಿನಾಂಕ 15-5-2020 ರಿಂದ ದಿನಾಂಕ 15-5-2021 ರ
ಡಿ.ಎಲ್.ಪಿ. ಅವಧಿಗೆ ಆಗಿದ್ದು ಗುತ್ತಿಗೆದಾರರಿಂದ ಸುಸ್ಥಿತಿಗೆ ತರುವುದು
ಅನುಷ್ಠಾನಾಧಿಕಾರಿಯವರ ಹೊಣೆಯಾಗಿರುತ್ತದೆ; ರಸ್ತೆ ಕಾಮಗಾರಿ ನಿರ್ಮಾಣದ ವಿರುದ್ಧ
ಮಾಡಿರುವ ಆಪಾದನೆಗಳು ಸಾಬೀತು ಆಗಿರುವುದಿಲ್ಲ ಎಂದು ನಿರ್ಣಯಿಸಲು
ತನಿಖಾಧಿಕಾರಿಯವರು ವೈಜ್ಞಾನಿಕ ಅಂಶಗಳನ್ನು ಬರೆದಿರುವುದಿಲ್ಲ; ಈ ರಸ್ತೆ ಸುಧಾರಣೆ
ಕಾಮಗಾರಿ ದಿ: 30-11-2019 ರಂದು ಪ್ರಾರಂಭಿಸಿ ದಿನಾಂಕ 23-11-2020 ರಂದು
ಪೂರ್ಣಗೊಳಿಸಿದ್ದಾರೆ; ಈ ಕಾಮಗಾರಿಯ ರಸ್ತೆ ಭಾಗಗಳನ್ನು ತನಿಖೆ ಮಾಡಿರುವುದಿಲ್ಲ;
ಇದೇ ರಸ್ತೆಯ ಭಾಗಗಳು ಮಳೆ ಪ್ರವಾಹದಿಂದ ಕೆಟ್ಟು ಹೋಗಿ ಫ್ಲಡ್ ಡ್ಯಾಮೇಜ್
ಅನುದಾನದಿಂದ ದಿನಾಂಕ 16-3-2020 ರಿಂದ ದಿನಾಂಕ 15-5-2020 ರ
ಅವಧಿಯಲ್ಲಿ ಪೂರೈಸಲಾಗಿದೆ; ಮಳೆ ಪ್ರವಾಹದಿಂದ ಹಾಳಾದ ನಂತರ ಫ್ಲಡ್
ಡ್ಯಾಮೇಜ್‌ನಲ್ಲಿ ತೆಗೆದುಕೊಂಡು ದಿನಾಂಕ 15-5-2020 ರಂದು ಪೂರ್ಣಗೊಳಿಸಿದ್ದು
ಒಂದು ವರ್ಷದ ಡಿ.ಎಲ್.ಪಿ. ಅವಧಿ ದಿನಾಂಕ 15-5-2021 ಎಂದು ನಿರ್ದಿಷ್ಟಪಡಿಸಿದ್ದು
ಇದೇ ಅವಧಿಯಲ್ಲಿ ಹಾಳಾಗಿರುತ್ತದೆ; ಈ ಅವಧಿಯ ಬಗ್ಗೆ ತನಿಖಾಧಿಕಾರಿ ವರದಿಯಲ್ಲಿ
ಉದ್ದೇಶಪೂರ್ವಕವಾಗಿ ತೋರಿಸಿಲ್ಲ; ರಸ್ತೆ ಕೆಡಲು ನೀಡಬೇಕಾದ ಕಾರಣಗಳನ್ನು

ತನಿಖಾಧಿಕಾರಿ ಗುಪ್ತವಾಗಿ ಮುಚ್ಚಿಟ್ಟಿದ್ದಾರೆ; ಗುತ್ತಿಗೆದಾರರನ್ನು ಪರೋಕ್ಷವಾಗಿ ಬೆಂಬಲಿಸಿ ನಿರ್ಮಾಣ ಮಾಡಿದ 5 ಜನ ಎದುರುದಾರರನ್ನು ರಕ್ಷಿಸಲು ಅವರೆಲ್ಲರ ತಪ್ಪು ತನ್ನ ಮೇಲೆ ಹಾಕುವ ಪ್ರಯತ್ನ ಮಾಡಲಾಗಿದೆ; ಡಿ.ಎಲ್.ಪಿ. ಅವಧಿಯ ಪೂರ್ವದಲ್ಲಿ ರಸ್ತೆ ಹಾಳಾಗಿದ್ದು ಅದಕ್ಕೆ ಸದರಿ 5 ಜನ ಎದುರುದಾರರು ದುರಸ್ಥಿ ಮಾಡಿಸಿಕೊಳ್ಳುವ ಹೊಣೆಗಾರರಾಗಿದ್ದು ತಾನು ಹೊಣೆಗಾರರನಾಗಿರುವುದಿಲ್ಲ; ಲೋಕೋಪಯೋಗಿ ಇಲಾಖೆ ಸಂಹಿತೆ ಡಿ-ಕೋಡ್ ನಿಯಮಗಳು 2014 ರ ನಿಯಮ 192 ರಡಿಯಲ್ಲಿ ಒಂದು ವರ್ಷದ Defect liability ಅವಧಿಗಾಗಿ ಗುತ್ತಿಗೆದಾರರಿಂದ ಕರಾರುಪತ್ರ ಮಾಡಿಕೊಂಡಿರುತ್ತೇನೆ; ಎರಡು ವರ್ಷಗಳ ಡಿ.ಎಲ್.ಪಿ. ನಿಗಧಿಪಡಿಸಲು ಸಂಹಿತೆಯಲ್ಲಿ ಅವಕಾಶ ಇರುವುದಿಲ್ಲ; ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಿದ ವರದಿ ಸಲ್ಲಿಸಿರುವುದಿಲ್ಲ; ಅನುಷ್ಠಾನಾಧಿಕಾರಿಗಳು ಗುತ್ತಿಗೆದಾರರು ಠೇವಣಿ ಮಾಡಿದ ಹಣವನ್ನು ಹಿಂದಿರುಗಿಸಿರುತ್ತಾರೆ; ತನ್ನಿಂದ ಯಾವುದೇ ನಿಯಮಾವಳಿ ಉಲ್ಲಂಘನೆ ಆಗಿರುವುದಿಲ್ಲ; ಅಭಿವೃದ್ಧಿಪಡಿಸಿದ ರಸ್ತೆಯು ನೆರೆ ಹಾವಳಿಯಿಂದ ಹಾಳಾಗಿದೆ ಎಂದು ಅಲ್ಪಾವಧಿ ಟೆಂಡರ್ ಕರೆದು ಗುತ್ತಿಗೆದಾರರಿಗೆ ವಹಿಸಿಕೊಟ್ಟು ಕರಾರುಪತ್ರ ಬರೆಯಿಸಿಕೊಂಡು ದುರಸ್ಥಿ ಕೆಲಸ ಮುಗಿದ ನಂತರ Defect liability ಅವಧಿ ನಿಗಧಿಪಡಿಸಲಾಗಿದೆ; ಅದರಂತೆ Defect liability ಅವಧಿ ದಿನಾಂಕ 15-5-2021 ಕ್ಕೆ ಕೊನೆಗೊಳ್ಳುತ್ತದೆ; ಹೀಗಿರುವಾಗ ದಿನಾಂಕ 24-6-2020 ರ 3ನೇ ಗುಣನಿಯಂತ್ರಣ ಅಧಿಕಾರಿಯ ವರದಿ ನಂಬಲರ್ಹವಾಗಿರುವುದಿಲ್ಲ; 5 ಬಿಲ್ಲುಗಳ ಮೊತ್ತ ಸಂದಾಯಿಸಿದ ನಂತರ 3ನೇ ಪಾರ್ಟಿ ವರದಿ ಪಡೆದುಕೊಳ್ಳಲಾಗಿದೆ; ಇವುಗಳಲ್ಲಿ ದಿನಾಂಕಗಳನ್ನು ತಿದ್ದುಪಡಿ ಮಾಡಲಾಗಿದೆ; ಎರಡು ವರ್ಷ ಡಿ.ಎಲ್.ಪಿ. ಅವಧಿ ನಿಗಧಿಪಡಿಸದೇ ಇರುವ ಏಕೈಕ ಕಾರಣ ತೋರಿಸಿ ಮೂಲ ಗುತ್ತಿಗೆದಾರರಿಂದ ದುರಸ್ಥಿ ಮಾಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ನೀಡಿರುವ ಅಭಿಪ್ರಾಯ ಲೋಕೋಪಯೋಗಿ ಇಲಾಖೆ ಸಂಹಿತೆಯ ವಿರುದ್ಧವಾದ ಅಭಿಪ್ರಾಯವಾಗಿರುತ್ತದೆ; ಕಾಮಗಾರಿ ಚಾಲ್ತಿಯಲ್ಲಿರುವಾಗಲೇ ರಸ್ತೆ ಹಾಳಾಗಿರುವುದು ಖಚಿತವಾಗಿರುತ್ತದೆ; ಆದರೆ ಗುತ್ತಿಗೆದಾರರಿಂದ ಮರುಕರಾರು ಮಾಡಿಕೊಂಡಿರುವುದಿಲ್ಲ; ಕಳಪೆ ಮಾಡಿದ್ದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಲಾಗಿದೆ;

ಕಾಮಗಾರಿ ಬಿಲ್ಲುಗಳ ಹಣ ಪಾವತಿ ಮತ್ತು ವಿವರಗಳನ್ನು ನಗದು ಪುಸ್ತಕದಲ್ಲಿ ನಮೂದಿಸಿರುವುದಿಲ್ಲ; ರೂ.4,28,299/- ಮೌಲ್ಯಮಾಪನ ಮಾಡಿರುವುದು ಅವೈಜ್ಞಾನಿಕವಾದ ಮಾನದಂಡವಾಗಿರುತ್ತದೆ; ರಸ್ತೆ ಕಾಮಗಾರಿ ಚಾಲ್ತಿ ಹಂತದಲ್ಲಿ ಕೆಟ್ಟಿದ್ದು ಅನುಷ್ಠಾನಾಧಿಕಾರಿಯವರು ತಮ್ಮ ತಪ್ಪು ಮುಚ್ಚಲು ಎರಡು ವರ್ಷದ ಡಿ.ಎಲ್.ಪಿ. ಅವಧಿ ನಿಗಧಿಪಡಿಸದ ಕಾರಣ ಕೊಟ್ಟಿರುವುದು ಅವೈಜ್ಞಾನಿಕವಾಗಿರುತ್ತದೆ; ಮುಂತಾಗಿ ಆಕ್ಷೇಪಣೆ ಮಾಡಿರುತ್ತಾರೆ.

11) 7ನೇ ಎದುರುದಾರರಾದ ಶ್ರೀ ವಿವೇಕ ಕುಲಕರ್ಣಿ ರವರ ಆಕ್ಷೇಪಣೆಗಳು;

7ನೇ ಎದುರುದಾರರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದಾರೆ; ಮುಂದುವರೆದು ಸಂಬಂಧಿತ ಟೆಂಡರ್‌ಗಳನ್ನು ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ. ರವರು ಕರೆದಿದ್ದು ಅದರಂತೆ ಟೆಂಡರ್ ಅನುಮೋದನೆ ಮಾಡಿ ವಿಭಾಗ ಕಛೇರಿಗೆ ಅಗ್ರಿಮೆಂಟ್ ಮಾಡಿಕೊಳ್ಳಲು ಅನುಮೋದಿತ ಟೆಂಡರ್ ಪ್ರತಿಯನ್ನು ಕಳುಹಿಸಿದ್ದು ಅದರ ಜೊತೆ ಟೆಂಡರ್ ಡಾಕ್ಯುಮೆಂಟ್ ಷರತ್ತುಗಳ ಪ್ರತಿಯನ್ನು ಸಲ್ಲಿಸಿರುವುದಿಲ್ಲ; ಆ ಕಾರಣ ಅಗ್ರಿಮೆಂಟ್ ಮಾಡಿಕೊಳ್ಳುವಾಗ Defect liability ಅವಧಿಯನ್ನು ಒಂದು ವರ್ಷ ಎಂದು ಕರಾರು ಮಾಡಿಕೊಳ್ಳಲಾಗಿದೆ; ಅದರ ವಿವರ ಈ ಕೆಳಗಿನಂತೆ ಇರುತ್ತದೆ;

| | | | |
|---|---|---|---|
| 1) | Tender notification | = | 17-02-2018 |
| 2) | Tender approval date | = | 18-5-2018 |
| 3) | Agreement work date | = | 11-7-2018 |
| 4) | Tender period | = | 9 Months |
| 5) | Work completion date | = | 30-11-2019 |
| 6) | Defect liability period (one year after completion of work) | = | 30-11-2020 |

ಕಾಮಗಾರಿ ಚಾಲ್ತಿಯಲ್ಲಿರುವಾಗಲೇ ದಿನಾಂಕ 7-11-2019 ರಂದು ಕಳಪೆ ಕಾಮಗಾರಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಲಾಗಿದೆ; ಆದರೆ ಸಂಬಂಧಪಟ್ಟ

ಅಧಿಕಾರಿಗಳು ಕ್ರಮ ಕೈಗೊಂಡಿರುವುದಿಲ್ಲ; ಕಳಪೆ ಕಾಮಗಾರಿ ಆರೋಪಗಳನ್ನು 1 ರಿಂದ 5ನೇ ಎದುರುದಾರರ ವಿರುದ್ಧ ಮಾಡಲಾಗಿದೆ; ಎ.ಇ.ಇ-5 ತನಿಖಾ ವರದಿಯ ಪ್ರಕಾರ ಬಾರಿ ಮಳೆ ಹಾಗೂ ಪ್ರವಾಹದಿಂದ ರಸ್ತೆ ಹಾಳಾಗಿರುತ್ತದೆ; ಅದನ್ನು ಫ್ಲಡ್ ಡ್ಯಾಮೇಜ್ ಅಡಿ ಟೆಂಡರ್ ಕರೆದು ಗುತ್ತಿಗೆ ನೇಮಿಸಿ ದುರಸ್ಥಿ ಮಾಡಲಾಗಿದೆ; ದುರಸ್ಥಿ ಕಾಮಗಾರಿ ದಿನಾಂಕ 16-3-2020 ರಿಂದ ದಿನಾಂಕ 15-5-2020 ರ ಅವಧಿ ಎಂದು ವರದಿ ನೀಡಲಾಗಿದೆ; 2019-20ನೇ ಸಾಲಿನ ಮಳೆಯಿಂದ ಹಾಳಾಗಿದ್ದರೂ ಸಹ Defect liability ಅವಧಿ ಚಾಲ್ತಿಯಲ್ಲಿದ್ದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರಿಂದ ರಸ್ತೆ ರಿಪೇರಿ ಮಾಡಿಸಿರುವುದಿಲ್ಲ; ಕಾಮಗಾರಿ ಚಾಲ್ತಿಯಲ್ಲಿರುವಾಗ ಹಾಗೂ ಡಿ.ಎಲ್.ಪಿ. ಚಾಲ್ತಿಯಲ್ಲಿರುವಾಗ ಫಿರ್ಯಾದಿ ನೀಡಿದ್ದು ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ; ಅಲ್ಲದೇ ರಾತ್ರಿ ಹೊತ್ತು ಅಕ್ರಮ ಮರಳು ಸಾಗಿಸುವ ಭಾರಿ ಟ್ರಕ್‌ಗಳು ಓಡಾಡಿ ರಸ್ತೆ ಹಾಳಾಗಿದೆ; 1 ರಿಂದ 4ನೇ ಎದುರುದಾರರು ಸೇರಿ ಸದರಿ ಕಾಮಗಾರಿ ನಿರ್ವಹಣೆ ಮಾಡಿರುತ್ತಾರೆ; ತಾನು ವಿಭಾಗ ಕಛೇರಿಯಲ್ಲಿ ತಾಂತ್ರಿಕ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಟೆಂಡರ್ ಅಗ್ರಿಮೆಂಟ್ ಮಾಡಿಕೊಂಡಿರುತ್ತೇನೆ; ಕಳಪೆ ಕಾಮಗಾರಿ ನನಗೆ ಯಾವುದೇ ಸಂಬಂಧ ಇಲ್ಲ; ಈ ಫಿರ್ಯಾದಿ ಸಲ್ಲಿಸಿದ 1 ವರ್ಷ 9 ತಿಂಗಳ ನಂತರ ಸ್ಥಳ ಪರಿಶೀಲನೆ ಮಾಡಲಾಗಿದೆ; ತನ್ನಿಂದ ಕರ್ತವ್ಯಲೋಪ ಇಲ್ಲದಿದ್ದರೂ ಸಹ ಲೋಪ ಎಂದು ತೋರಿಸಲಾಗಿದೆ; ತಾನು ಸರ್ಕಾರಿ ಸೇವೆಯಿಂದ ನಿವೃತ್ತನಾಗಿದ್ದು ಪ್ರಕರಣದಿಂದ ತನ್ನನ್ನು ಕೈಬಿಡಲು ವಿನಂತಿ ಇರುತ್ತದೆ; ಮುಂತಾಗಿ ಆಕ್ಷೇಪಣೆ ಮಾಡಿದ್ದಾರೆ.

12) ಸದರಿ ಆಕ್ಷೇಪಣೆಗಳಿಗೆ ಫಿರ್ಯಾದಿದಾರರಿಂದ ಪ್ರತ್ಯುತ್ತರ ಕೇಳಲಾಗಿದ್ದು ಫಿರ್ಯಾದಿದಾರರು ದಿನಾಂಕ 17-8-2022 ರ ಪ್ರತ್ಯುತ್ತರ ಸಲ್ಲಿಸಿದ್ದಾರೆ; ಸದರಿ ಪ್ರತ್ಯುತ್ತರದಲ್ಲಿ ತಾನು ಕಳಪೆ ಮಟ್ಟದ ಕಾಮಗಾರಿ ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಫಿರ್ಯಾದಿ ನೀಡಿದ್ದು ಕಾಮಗಾರಿ ಅಗ್ರಿಮೆಂಟ್ ಬಗ್ಗೆ ದೂರು ಇರುವುದಿಲ್ಲ ಎಂದು ಸ್ಪಷ್ಟೀಕರಣ ನೀಡುತ್ತಿದ್ದೇನೆ; ಕಾಮಗಾರಿ ಮೂರು ತಿಂಗಳಲ್ಲಿ

ಕಿತ್ತುಕೊಂಡು ಹೋಗಿ ಹಾಳಾಗಿದ್ದು ಮಳೆ ಕಾರಣ ತೋರಿಸಿ ನೀಡಿದ ವರದಿ ಸರಿಯಾಗಿರುವುದಿಲ್ಲ; ಕಳಪೆ ಮಟ್ಟದ ಕಾಮಗಾರಿಯಿಂದ ರಸ್ತೆ ಹಾಳಾಗಿದ್ದು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೇಳಿದ್ದಾರೆ.

13) ಎದುರುದಾರರ ಮೇಲಿನ ಆರೋಪ, ಎದುರುದಾರರ ಆಕ್ಷೇಪಣೆ, ತನಿಖಾಧಿಕಾರಿಗಳ ವರದಿ, ಫಿರ್ಯಾದಿದಾರರ ಪ್ರತ್ಯುತ್ತರ ಮತ್ತು ಹಾಜರುಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ಕಂಡುಬರುತ್ತವೆ;

- 1 ರಿಂದ 4ನೇ ಎದುರುದಾರರ ವಿರುದ್ಧ ಮಾಡಿರುವ ಆರೋಪಗಳು ಸಾಬೀತಾಗಿರುವುದಿಲ್ಲ ಎಂದು ತನಿಖಾಧಿಕಾರಿಗಳು ಅಭಿಪ್ರಾಯಿಸಿದ್ದಾರೆ; ಪ್ರಪತ್ರ-1 ಮತ್ತು 2 ರಲ್ಲಿ "1 ರಿಂದ 4ನೇ ಎದುರುದಾರರು ಕಳಪೆ ಕಾಮಗಾರಿ ಮಾಡಲು ಗುತ್ತಿಗೆದಾರರಿಗೆ ಸಹಾಯ ಮಾಡುತ್ತಿದ್ದು ಕಳಪೆ ವಸ್ತುಗಳ ಬಳಕೆ ಮಾಡಿದ್ದು ಆ ಕಾರಣಕ್ಕೆ ಕಾಮಗಾರಿ ಕಿತ್ತು ಹೋಗಿದ್ದು" ಮುಂದುವರೆದು "ರಸ್ತೆ ಕಾಮಗಾರಿ ಸರ್ಕಾರದ ಎಸ್ಟಿಮೇಟ್ ಪ್ರಕಾರ ಮಾಡುತ್ತಿಲ್ಲ" ಎಂದು ಆರೋಪಿಸಲಾಗಿದೆ; ಫಿರ್ಯಾದಿದಾರರು ದಿನಾಂಕ 17-8-2022 ರ ತಮ್ಮ ಪ್ರತ್ಯುತ್ತರದಲ್ಲಿ ಕಾಮಗಾರಿ ಅಗ್ರಿಮೆಂಟ್ ಬಗ್ಗೆ ತನ್ನ ದೂರು ಇರುವುದಿಲ್ಲ ಎಂದು ಸ್ಪಷ್ಟೀಕರಣ ನೀಡಿದ್ದಾರೆ; ಮುಂದುವರೆದು ಕಳಪೆ ಕಾಮಗಾರಿ ಬಗ್ಗೆ ಮಾತ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ; ಸದರಿ ಎರಡು ಅಂಶಗಳು ಸಾರ್ವಜನಿಕ ಸಮಸ್ಯೆಗೆ ಸಂಬಂಧಿಸಿದ ಅಂಶಗಳಾಗಿದ್ದು ಫಿರ್ಯಾದಿದಾರರ ಪ್ರತ್ಯುತ್ತರವನ್ನು ಒಪ್ಪಲು ಬಾರದು; ಹೀಗಾಗಿ ಕಾಮಗಾರಿ ಅಗ್ರಿಮೆಂಟ್ ಬಗ್ಗೆ ಕೂಡ ತನಿಖಾಧಿಕಾರಿ ಸಲ್ಲಿಸಿದ ವರದಿಯನ್ನು ಪರಿಶೀಲನೆ ಮಾಡಬೇಕಾಗಿರುತ್ತದೆ; ಸದರಿ ಕಾಮಗಾರಿ ಅಗ್ರಿಮೆಂಟ್ ಡಿ.ಎಲ್.ಪಿ. ಅವಧಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಪರಿಶೀಲನೆಗೆ ಒಳಗಾಗಿದ್ದು ಕಳಪೆ ಕಾಮಗಾರಿ ಆರೋಪಕ್ಕೆ ಪರೋಕ್ಷವಾಗಿ ಸಂಬಂಧಿಸಿರುವುದು ಕಂಡುಬರುತ್ತದೆ;
- ದಿನಾಂಕ 11-7-2018 ರ ಕರಾರು ಪತ್ರವನ್ನು ತಮ್ಮ ಅವಧಿಯಲ್ಲಿ ತಾವೇ ಮಾಡಿಕೊಂಡಿರುವುದಾಗಿ 6 ಮತ್ತು 7ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಒಪ್ಪಿಕೊಂಡಿದ್ದಾರೆ;

ಸದರಿ ಕರಾರು ಪತ್ರದಲ್ಲಿ ಡಿ.ಎಲ್.ಪಿ. ಅವಧಿಯನ್ನು "Defect Liability Period one year from the date of completion" ಎಂದು ನಮೂದಿಸಲಾಗಿದೆ; ಡಿ.ಎಲ್.ಪಿ.ಯನ್ನು ಒಂದು ವರ್ಷ ನಮೂದಿಸಿದ ಬಗ್ಗೆ 6 ಮತ್ತು 7ನೇ ಎದುರುದಾರರು ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿದ್ದಾರೆ;

- ದಿನಾಂಕ 20-12-2018 ರಂದು ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ "Technical note for the works taken up under Gandhi Patha Grama Patha (SDP) ಗಳ ಅಡಿಯಲ್ಲಿ ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಲು ತಾಂತ್ರಿಕ ಅನುಮೋದನೆ ನೀಡಿದ್ದಾರೆ; Technical Note for the works taken up under Gandhi Patha Grama Patha (SDP) ನಲ್ಲಿನ ಸಂಖ್ಯೆ:25 ರಲ್ಲಿ 'Two year DLP should be provided in the tender condition' "ಎಂದು ನಮೂದಿಸಿರುವುದು ಕಂಡುಬರುತ್ತದೆ; ಅದಲ್ಲದೇ ಕಾಮಗಾರಿಗೆ ಸಂಬಂಧಿಸಿದ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ (Tender Document) "The Defect Liability Period is 730 days" ಎಂದು ನಮೂದಿಸಲಾಗಿದೆ; ಸದರಿ ಟೆಂಡರ್ ಡಾಕ್ಯೂಮೆಂಟ್‌ನ್ನು ತಮ್ಮ ಗಮನಕ್ಕೆ ತರದೇ ಮುಚ್ಚಿಡಲಾಗಿದೆ ಎಂಬ 6 ಮತ್ತು 7ನೇ ಎದುರುದಾರರ ವಾದವನ್ನು ಈ ಹಂತದಲ್ಲಿ ಒಪ್ಪಲಾಗದು;
- ರಸ್ತೆಯನ್ನು ದಿನಾಂಕ 11-7-2018 ರಂದು ಪ್ರಾರಂಭಿಸಿ ದಿನಾಂಕ 31-10-2019 ರಂದು ಪೂರ್ಣಗೊಳಿಸಿ ತದನಂತರ ಟೆಂಡರ್ ಕರಾರಿನಂತೆ ಡಿ.ಎಲ್.ಪಿ. ಅವಧಿಯಾದ ಒಂದು ವರ್ಷದವರೆಗೆ ಅಂದರೆ ದಿನಾಂಕ 31-10-2020 ರವರೆಗೆ ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ದಿನಾಂಕ 23-11-2020 ರಂದು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ, ಹಾಗಾಗಿ ಸದರಿ ರಸ್ತೆಯ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರ ಜವಾಬ್ದಾರಿಯಾಗಿರುತ್ತದೆ ಎಂಬ ಅಂಶಕ್ಕೆ ಸಂಬಂಧಿಸಿ ಮೇಲ್ನೋಟಕ್ಕೆ ಕಂಡುಬರುವ ಅಂಶಗಳಿದ್ದು ಸದರಿ ಅಂಶಗಳು 6 ಮತ್ತು 7ನೇ ಎದುರುದಾರರ ವಿರುದ್ಧ ಇರುವುದು ಕಂಡುಬರುತ್ತದೆ; ದಿನಾಂಕ 11-7-2018 ರ ಕರಾರು ಪತ್ರದಲ್ಲಿ ಟೆಂಡರ್ ಡಾಕ್ಯೂಮೆಂಟ್ ಪ್ರಕಾರ

ಡಿ.ಎಲ್.ಪಿ. ಅವಧಿಯನ್ನು ಎರಡು ವರ್ಷಗಳಿಗೆ ಷರತ್ತು ಹಾಕದೇ ಒಂದು ವರ್ಷಕ್ಕೆ ಹಾಕಿರುವುದು ಮೇಲ್ನೋಟಕ್ಕೆ ಕಂಡುಬಂದ ಅಂಶವಾಗಿದೆ; ದಿನಾಂಕ 23-11-2020 ರಂದು ರಸ್ತೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಿರುವುದನ್ನು 6 ಮತ್ತು 7ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಅಲ್ಲಗಳೆದಿರುವುದಿಲ್ಲ;

- ದಿನಾಂಕ 30-11-2019 ಕ್ಕೆ ಕಾಮಗಾರಿ ಪೂರ್ಣಗೊಳಿಸಿರುವುದನ್ನು 7ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿಯೇ ನಮೂದಿಸಿದ್ದಾರೆ; ಈ ಅಂಶವನ್ನು ಪರಿಗಣಿಸಿ ದಿನಾಂಕ 30-11-2019 ರಿಂದ ಎರಡು ವರ್ಷಗಳ ಡಿ.ಎಲ್.ಪಿ. ಅವಧಿ ದಿನಾಂಕ 30-11-2021 ಕ್ಕೆ ಪೂರ್ಣಗೊಳ್ಳುತ್ತದೆ; ದಿನಾಂಕ 23-11-2020 ರಂದು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸುವಾಗ ರಸ್ತೆ ಸುಸ್ಥಿತಿಯ ಬಗ್ಗೆ ಯಾರಿಂದಲೂ ಯಾವುದೇ ತಕರಾರು ಇರುವುದು ಕಂಡುಬರುವುದಿಲ್ಲ;
- ದಿನಾಂಕ 24-6-2020 ರಂದು District Quality Monitor Officer ರವರು ರಸ್ತೆ ಸುಸ್ಥಿತಿಯ ಬಗ್ಗೆ ವರದಿ ನೀಡಿರುವುದನ್ನು ತನಿಖಾ ವರದಿಗೆ ಲಗತ್ತಿಸಲಾಗಿದೆ;
- ಲೋಕೋಪಯೋಗಿ ಇಲಾಖೆ ಸಂಹಿತೆ ಡಿ-ಕೋಡ್ ನಿಯಮಗಳು 2014 ರ ನಿಯಮ 192 ಇದರ ಪ್ರಕಾರ ತಾವು ದಿನಾಂಕ 11-7-2018 ರ ಕರಾರು ಪತ್ರ ಮಾಡಿಕೊಂಡಿರುವುದು ಎರಡು ವರ್ಷಗಳ ಡಿ.ಎಲ್.ಪಿ. ನಿಗಧಿಪಡಿಸಲು ಸಂಹಿತೆಯಲ್ಲಿ ಅವಕಾಶ ಇರುವುದಿಲ್ಲ ಎಂಬ 6 ಮತ್ತು 7ನೇ ಎದುರುದಾರರ ಆಕ್ಷೇಪಣೆಯನ್ನು ಈ ಹಂತದಲ್ಲಿ ಒಪ್ಪಲಾಗದು; ಸದರಿ ಅಂಶ ಹಾಗೂ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿದ ಎರಡು ವರ್ಷಗಳ ಡಿ.ಎಲ್.ಪಿ. ಷರತ್ತು ಒಂದಕ್ಕೊಂದು ವಿರುದ್ಧವಾಗಿದ್ದು ಅವುಗಳ ಬಗ್ಗೆ ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯ ವಿಚಾರಣೆಯ ಮೂಲಕವೇ ನಿರ್ಧರಿಸುವ ಅಂಶಗಳಾಗಿದ್ದು ಈ ಹಂತದಲ್ಲಿ ತನಿಖೆಯ ಮೂಲಕ ಸದರಿ ಅಂಶಗಳ ನಿರ್ಧಾರ ಕೈಗೊಳ್ಳುವುದು ಉಚಿತವಾಗಲಾರದು; ಸದರಿ ಅಂಶಗಳ ಬಗ್ಗೆ ಮೌಖಿಕ ಸಾಕ್ಷಿ ಮೂಲಕವೇ ವಿಚಾರಣೆ ನಡೆಸುವುದು ಯೋಗ್ಯವಾಗಿದೆ;
- ಈ ಅಂಶಗಳನ್ನು ಪರಿಗಣಿಸಿದಾಗ 6 ಮತ್ತು 7ನೇ ಎದುರುದಾರರ ವಿರುದ್ಧ ಪ್ರತಿಕೂಲ ಅಂಶಗಳು ಕಂಡುಬರುತ್ತದೆ; ಡಿ.ಎಲ್.ಪಿ. ಅವಧಿಯನ್ನು ಟೆಂಡರ್ ಡಾಕ್ಯೂಮೆಂಟ್ ಪ್ರಕಾರ

ಎರಡು ವರ್ಷಗಳಿಗೆ ಷರತ್ತು ಹಾಕದೇ ಒಂದು ವರ್ಷಕ್ಕೆ ಸೀಮಿತಗೊಳಿಸಿರುವುದು 6 ಮತ್ತು 7ನೇ ಎದುರುದಾರರು ಹಾಗೂ ಮೃತ ಮುಸ್ತಾಕ್ ಅಹಮದ್ ರವರು ಮಾಡಿದ ಕರ್ತವ್ಯ ಲೋಪ ಎಂದು ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ತೋರಿಸಿದ್ದಾರೆ;

- 6 ಮತ್ತು 7ನೇ ಎದುರುದಾರರು ತನಿಖಾಧಿಕಾರಿ ವರದಿಗೆ ಸಲ್ಲಿಸಿದ ಆಕ್ಷೇಪಣೆಗಳನ್ನು ಈ ಹಂತದಲ್ಲಿ ಒಪ್ಪಲು ಬಾರದು;
- 1 ರಿಂದ 4ನೇ ಎದುರುದಾರರಿಂದ ಕಳಪೆ ಕಾಮಗಾರಿಯಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ 6 ಮತ್ತು 7ನೇ ಎದುರುದಾರರು ತನಿಖಾಧಿಕಾರಿ ವರದಿಯನ್ನೇ ತೋರಿಸುತ್ತಿದ್ದು ತಮ್ಮ ಪರವಾಗಿ ಇತರೇ ಯಾವುದೇ ಸಾಕ್ಷ್ಯಾಧಾರ ಅಥವಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ; ದಿನಾಂಕ 11-7-2018 ರ ಕರಾರು ಪತ್ರಕ್ಕೆ ಹಾಗೂ ತಮ್ಮ ಮೇಲಿನ ಆರೋಪಕ್ಕೆ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂಬ ಅಂಶವನ್ನು 6 ಮತ್ತು 7ನೇ ಎದುರುದಾರರೇ ಸಿದ್ಧಪಡಿಸಬೇಕಾಗುತ್ತದೆ;
- ಮೇಲ್ಕಾಣಿಸಿದ ಕಾರಣಗಳಿಗಾಗಿ 6 ಮತ್ತು 7ನೇ ಎದುರುದಾರರ ಆಕ್ಷೇಪಣೆಗಳನ್ನು ಈ ಹಂತದಲ್ಲಿ ಒಪ್ಪಿಕೊಳ್ಳಲಾಗದು; ಸದರಿ ಎಲ್ಲಾ ಅಂಶಗಳ ವಿಚಾರಣೆಗಾಗಿ ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ ಅಡಿ 6 ಮತ್ತು 7ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮದ ಶಿಫಾರಸ್ಸಿನ ಅವಶ್ಯಕತೆ ಕಂಡುಬರುತ್ತದೆ;
- ತನಿಖಾಧಿಕಾರಿ ತಮ್ಮ ವರದಿಯಲ್ಲಿ ಮೃತ ಮುಸ್ತಾಕ ಅಹಮದ್ ಹಾಗೂ 6 ಮತ್ತು 7ನೇ ಎದುರುದಾರರ ಕರ್ತವ್ಯ ಲೋಪದಿಂದ ರಸ್ತೆಯಲ್ಲಿ Potholeಗಳಾಗಿ ರಸ್ತೆ ಹಾಳಾಗಿದ್ದು ಅದರ ದುರಸ್ಥಿಗಾಗಿ ರೂ.4,28,290/- ಗಳನ್ನು ಸಂಬಂಧಪಟ್ಟವರಿಂದ ಸರ್ಕಾರಕ್ಕೆ ವಸೂಲು ಮಾಡುವುದು ಅವಶ್ಯಕ ಇರುತ್ತದೆ ಎಂದು ಅಭಿಪ್ರಾಯಿಸಿ ಸದರಿಯವರಿಂದ ಸದರಿ ಮೊತ್ತವನ್ನು ವಸೂಲಾತಿ ಮಾಡಬಹುದೆಂದು ತಿಳಿಸಿರುತ್ತಾರೆ; ಈ ಅಂಶವನ್ನು ಇದೇ ಹಂತದಲ್ಲಿ ಪರಿಗಣಿಸುವುದು ಅವಶ್ಯಕ ಇರುತ್ತದೆ; ಮುಸ್ತಾಕ್ ಅಹಮದ್ ರವರು ಮೃತರಾಗಿದ್ದು ಸದರಿ ರೂ.4,28,290/- ಗಳನ್ನು 6 ಮತ್ತು 7ನೇ ಎದುರುದಾರರಿಂದ ನಿಯಮಾನುಸಾರ ಸರ್ಕಾರಕ್ಕೆ ವಸೂಲಿ ಮಾಡಿ ಭರಪಾಯಿ ಮಾಡಲು ನಿರ್ದೇಶನ ನೀಡುವುದು ಅವಶ್ಯ ಇರುತ್ತದೆ; ಅದರಂತೆ ಕಲಂ 12(1) ಲೋಕಾಯುಕ್ತ ಕಾಯ್ದೆ ಅಡಿ ನಿರ್ದೇಶನದ ಅವಶ್ಯಕತೆ ಇರುತ್ತದೆ;

14) ಮೇಲಿನ ಎಲ್ಲಾ ಕಾರಣಗಳಿಂದ 6 ಮತ್ತು 7ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 2021) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ.

15) 6ನೇ ಎದುರುದಾರರಾದ ಶ್ರೀ ಮೋನಪ್ಪ ಇವರು ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1)(i) ರಿಂದ (iii) ಸಹ ನಿಯಮ 14–ಎ ರಡಿಯಲ್ಲಿ ಮತ್ತು 7ನೇ ಎದುರುದಾರರಾದ ಶ್ರೀ ವಿವೇಕ ಕುಲಕರ್ಣಿ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 2021) ಸಹವಾಚಕ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 214(2)(ಬಿ)(ii) ರಡಿ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 6 ಮತ್ತು 7ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು **ಘನ ಲೋಕಾಯುಕ್ತ ಸಂಸ್ಥೆಗೆ** ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

16) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/9/23

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
**ಉಪಲೋಕಾಯುಕ್ತರು**
**ಕರ್ನಾಟಕ ರಾಜ್ಯ**